# ಐರನ್ ಲೇಡಿ!





**ಭ**ಳಿರೇ ಹೆಣ್ಣೇ!

ಐರನ್ ದೇಹದ ಈ ಲೇಡಿಯ ಹೆಸರು ಐರನೆ. ಸ್ವೀಡನ್ನಿನ ಅತ್ಯಂತ ಗಟ್ಟಿಗಿತ್ತಿ ಮಹಿಳೆ ಎಂಬ ಬಿರುದು ಪಡೆದವಳು. ಅಕ್ಕ ಪಕ್ಕದ ರಾಷ್ಟ್ರಗಳಲ್ಲೂ ಈಕೆಯ ವಜ್ರದೇಹದ ಖ್ಯಾತಿ ಹಬ್ಬಿದೆ. ಹತ್ತಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿವೆ.

ಡೆನ್ಮಾರ್ಕ್‌ನಲ್ಲಿ 1966ರಲ್ಲಿ ಜನಿಸಿದ ಐರನೆ, ದೇಹದಾರ್ಢ್ಯ ಸ್ಪರ್ಧೆಯಲ್ಲಿ ಗಂಡಸರನ್ನೂ ಹಿಂದಿಕ್ಕಿದ್ದಾಳೆ. ಈ ಕ್ಷೇತ್ರ ಗಂಡಸರಿಗೆ ಮಾತ್ರ ಮೀಸಲಲ್ಲ ಎಂದು ಸಾರಿ ಹೇಳಿದ್ದಾಳೆ.

ಹದಿನೈದರ ಹರೆಯದ್ಲಲ್ಲೇ ಈಕೆಗೆ ಬಾಡಿ ಬಿಲ್ಡಿಂಗ್ ಹುಚ್ಚು ಅಂಟಿಕೊಂಡಿತು. ಸತತ ಹಾಗೂ ಕಠಿಣ ಪರಿಶ್ರಮದ ಮೂಲಕ ಈಗಿನ ಸಾಧನೆಯ ಮಟ್ಟಕ್ಕೆ ಏರಿದಳು. ಈಗ ಈಕೆಯದ್ದು ಅನ್ವರ್ಥಕ ನಾಮ. ಐರನೆ ಎಂಬ ಐರನ್‌ಲೇಡಿ!

ಇದಕ್ಕೂ ಮೊದಲು ಜಾಜ್ ನೃತ್ಯಗಾತಿಯಾಗಿದ್ದಳು. ಜತೆಗೆ ಜೂಡೊ ಕಲೆಯಲ್ಲಿಯೂ ಪರಿಣಿತಿ ಪಡೆದಿದ್ದಾಳೆ. ಸ್ವೀಡನ್ನಿನಲ್ಲಿ ಜನ ಈಕೆಯನ್ನು ತುಂಬ ಗೌರವಿಸುತ್ತಾರೆ.

ನಮ್ಮಲ್ಲಿ ಹೆಣ್ಣನ್ನು ಅಬಲೆ ಎಂಬಂತೆ ಕಾಣುವವರೇ ಹೆಚ್ಚು. ಐರನೆಯತ್ತ ಅಂತಹವರು ಕಣ್ಣೆತ್ತಿ ನೋಡುವ ಧೈರ್ಯ ಮಾಡಲಿಕ್ಕಿಲ್ಲ.. ಅಲ್ಲವೆ?

■ ಮಾವ